ಪ್ರಕಟಣೆ

ಅಧ್ಯಕ್ಷರು.—ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಜ್ಜೀಬಾಳ್ ಜಿ. ಎಸ್. ಹೆಗ್ಡೆಯವರು ೧೯ನೇ ಆಗಸ್ಟ್, ೧೯೮೫ ರಿಂದ ೧೫ ದಿನಗಳ ಕಾಲ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ಅಜ್ಜೀಬಾಳ ಜಿ. ಎಸ್. ಹೆಗ್ಡೆ ಅವರು ಸದರಿ ಉಪವೇಶನಗಳಿಗೆ ಗೈರು ಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

ಮಾನ್ಯ ಸದಸ್ಯರುಗಳು.—ಆಗಬಹುದು.

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಅಜ್ಜೀಬಾಳ ಜಿ. ಎಸ್. ಹೆಗ್ಡೆ ಅವರಿಗೆ ಅನುಮತಿ ನೀಡಲಾಗಿದೆ.

ಮಂಡನೆಗಳು

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಚರ್ಚೆ ಮಾಡಬೇಕು ಎಂದು ತಮ್ಮ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ನಿಮಗೆ ಇಂಟಿಮೇಷನ್ ಬಂದಿದೆಯೇ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅನುಮತಿ ನಿರಾಕರಣೆ ಮಾಡಿದ್ದೇವೆಂದು ತಮಗೆ ತಿಳಿಸಿದ್ದೇವೆ. ಈಗ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ನಾವು ರಿಜೆಕ್ಟ್ ಮಾಡಿದಮೇಲೆ ಆ ವಿಷಯವೇ ಮುಗಿದು ಹೋಯಿತು. ಈಗ ಸಭೆಯ ಮುಂದೆ ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಪಂಪಾಪತಿ.—ಕೇಂದ್ರದವರೇ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ವಿಜಯನಗರ ಉಕ್ಕಿನ ಕಾರ್ಖಾನೆಯ ಸಮಸ್ಯೆ ಇದೆ.

ಅಧ್ಯಕ್ಷರು.—ನಿಮಗೆ ರೂಲ್ಸನ್ನು ಕಳಿಸಿಕೊಡುತ್ತೇನೆ, ಓದಿ.

ಶ್ರೀ ಪಂಪಾಪತಿ.—ಕೇಂದ್ರದವರು ಅನೇಕ ಸಮಸ್ಯೆಗಳನ್ನು ಬಗೆಹರಿಸಿರುತ್ತಾರೆ. ನಮ್ಮ ರಾಜ್ಯದಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಯ ಪ್ರಶ್ನೆ ೧೫ ವರ್ಷಗಳಿಂದ ಇದೆ. ಇದಕ್ಕೆ ಅವಕಾಶ ಮಾಡಿಕೊಟ್ಟರೆ...

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡುವುದಿಲ್ಲ. I have withheld my consent.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳು ೧೯೮೪ ರಲ್ಲಿ ಒಂದು ಕಮಿಟಿಯನ್ನು ರಚಿಸಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ ಎಂದು ಹೇಳಿದ್ದರು. ಒಂದು ವರ್ಷವಾದರೂ ನಿಯೋಗ ಹೋಗಲಿಲ್ಲ. ಈ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವುದು ಬಹಳ ಅಗತ್ಯವಿದೆ.

ಅಧ್ಯಕ್ಷರು.—ನಿಮಗೆ ಎಷ್ಟು ಸಲ ಹೇಳಬೇಕು.

ಶ್ರೀ ಪಂಪಾಪತಿ.—ಎಷ್ಟು ಸಲ ಹೇಳಿದ್ದೀರಿ.

ಅಧ್ಯಕ್ಷರು.—ರೂಲ್ಸ್, ರೆಗ್ಯುಲೇಷನ್‌ನನ್ನು ತಾವು ಓದುತ್ತಾ ಇರಬೇಕು.

ಶ್ರೀ ಪಂಪಾಪತಿ.—ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ.

ಅಧ್ಯಕ್ಷರು.—ಪಂಪಾಪತಿಯವರೆ ನೀವು ಏನು ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಪಂಪಾಪತಿ.—ಹೋಗದೇ ಇದ್ದರೂ ಚಿಂತೆಯಿಲ್ಲ ತಾವು ಈ ಪ್ರಶ್ನೆಯನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇಕು ಇಲ್ಲದೇಹೋದರೆ ನಾನು ಸಭಾತ್ಯಾಗ ಮಾಡುತ್ತೇನೆ

ಅಧ್ಯಕ್ಷರು.—ಆ ರೀತಿ ಮಾಡಿದರೆ ಅದು contempt of the House ಆಗುತ್ತದೆ. ದಯವಿಟ್ಟು ಕುಳಿತುಕೊಳ್ಳಿ. ನೀವು ಹಳಬರಾದರೂ ಹೊಸಬರು. ನಿಮ್ಮ ಮೇಲೆ contempt of the House ಆಗುತ್ತದೆ.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ಅವರು ಈ ವಿಷಯವನ್ನು ಹೇಳಿ ಒಂದು ವರ್ಷವಾಯಿತು.

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಪಂಪಾಪತಿ.—ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಪಂಪಾಪತಿ.—ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ದಯವಿಟ್ಟು ನನಗೆ ಅವಕಾಶಕೊಡಿ.

ಅಧ್ಯಕ್ಷರು.—ನೀವು ಕಾಲಿಂಗ್ ಅಟೆನ್‌ಷನ್ ಕಳಿಸಿಕೊಡಿ, ನಾಳೆ ಬೇಕಾದರೆ ಅದನ್ನೇ ಹಾಕಿಸೋಣ.

ಶ್ರೀ ಪಂಪಾಪತಿ.—ನಾನು ಕಳುಹಿಸಿದ್ದೇನೆ. ನಿನ್ನೆಯೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡೋಣ ಎಂದು ಹೇಳಿದ್ದರು.

ಅಧ್ಯಕ್ಷರು.—ರೂಲ್ಸ್‌ನ್ನು ನೋಡಿ. ನೀವು ಹಳಬರಾದರೂ ಹೊಸಬರೇ. ನಾವು ಪದ್ಧತಿ ಪ್ರಕಾರ ಹೋಗಬೇಕಾಗುತ್ತದೆ. ತಾವು ಹಿರಿಯ ಸದಸ್ಯರು ಹಳೆಯ ನಿಯಮಗಳನ್ನು ಹೊಸದಾಗಿ ನಿಮಗೆ ಹೇಳ ಬೇಕಾಗಂತ್ತದೆ.

> "When the Speaker withholds his consent to the moving of adjournment motion in his chamber, it is neithar obligatory to read out the motion nor to .."

ತಾವು ಮಾತನಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ತಾವು ಕೂಡಿ.

ಶ್ರೀ ಪಂಪಾಪತಿ.—ಇದು ರಾಜ್ಯದ ಪ್ರಶ್ನೆ : ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕು. ೧೫ ವರ್ಷಗಳಿಂದ ನೆನಗುದಿಗೆ ಬಿದ್ದಿರತಕ್ಕ ಪ್ರಶ್ನೆ ಇದು. ಇದಕ್ಕಿಂತಲೂ ಮಹತ್ವವಾದ ಪ್ರಶ್ನೆ ಯಾವುದು ?

ಅಧ್ಯಕ್ಷರು.—ತಾವು ಕೇಳಿರಿ ಇಲ್ಲಿ,

ಶ್ರೀ ಪಂಪಾಪತಿ.—೧೫ ವರ್ಷಗಳಿಂದ ನೆನಗುದಿಗೆ ಬಿದ್ದಿರತಕ್ಕ ಪ್ರಶ್ನೆ ಇದು. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲು ನಿಯೋಗವನ್ನು ಕರೆದುಕೊಂಡು ಹೋಗೋಣವೆಂದು ಹೇಳಿದ್ದರು.

ಅಧ್ಯಕ್ಷರು.—ನಾಳೆ, ನಾಡಿದ್ದು ಕಾಲಿಂಗ್ ಅಟೆನ್‌ಷನ್ ಕಳಿಸಿಕೊಡಿ ಎಂದು ನಾನು ಆಗಲೇ ತಪ್ಪಗೆ ಹೇಳಿದ್ದೇನೆ. ಇಷ್ಟು ಹೇಳಿದರೂ ನೀವು ಪದೇ ಪದೇ ಈ ರೀತಿ ಮಾತನಾಡುವುದು ಸರಿಯ ಲ್ಲ.

ಶ್ರೀ ಪಂಪಾಪತಿ.—ಸೂಚನೆಯನ್ನು ಕಳಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ಅವರು ನಿನ್ನೆಯ ರಲ್ಲಿ ಹೇಳಿದ್ದರು.

ಅಧ್ಯಕ್ಷರು.—ತಾವು ಏನು ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ಬೇರೆ ರೂಪದಲ್ಲಿ ಕಳಹಿಸಿಕೊಡಿ, ನಾನು ಅದನ್ನು ಹಾಕುತ್ತೇನೆ.

ಶ್ರೀ ಪಂಪಾಪತಿ.— ತಾವೂ ಕೂಡ ಹಿಂದೆ ಅನೇಕ ಸಾರಿ ಸದನದಲ್ಲಿ ಎತ್ತಿದ್ದಿರಿ.

ಅಧ್ಯಕ್ಷರು.—ಶ್ರೀ ಎಂ. ಎಸ್. ಕೃಷ್ಣನ್‌ರವರಿಗೆ ಉತ್ತರ ಕೊಟ್ಟಿದೆ. ತಾವು ಬೇಕಾದರೆ ತರಿಸಿಕೊಂಡು ನೋಡಿ.

ಶ್ರೀ ಪಂಪಾಪತಿ.—ನಯವಿಟ್ಟು ಚರ್ಚೆ ಮಾತುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಈ ತರಹ ಮಾತನಾಡಿದರೆ ನಿಮ್ಮ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಇದು ಸರಿಯಲ್ಲ. ಎಲ್ಲರೂ ಸೇರಿ ನನ್ನನ್ನು ಜವಾಬ್ದಾರಿ ಸ್ಥಾನದಲ್ಲಿ ಕೂಡಿಸಿದ್ದೀರಿ. ನಿಯಮಗಳನ್ನು ಬಿಟ್ಟು ಹೋದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಂಪಾಪತಿ.—ನಾವು ಪ್ರಮುಖವಾದಂತಹ ಪ್ರಶ್ನೆಯನ್ನು ಎತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ಅವರು ಎಲ್ಲಾ ಪಕ್ಷದ ನಾಯಕರ ಒಂದು ನಿಯೋಗವನ್ನು ಕಳುಹಿಸಿ ಕೊಡುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಪಂಪಾಪತಿಯವರು ಮೊನ್ನೆ ತಾನೆ ಆರಿಸಿಬಂದ ಸದಸ್ಯರಲ್ಲ. ಅವರಿಗೆ ನೀತಿ ನಿಯಮ, ರೂಲ್ಸ್ ಎಲ್ಲಾ ಚೆನ್ನಾಗಿ ಗೊತ್ತಿದೆ. ವಿಜಯನಗರ ಉಕ್ಕಿನ ಕಾರ್ಖಾನೆ ಆಕಸ್ಮಿಕವಾಗಿ ನಿನ್ನೆ ಉದ್ಭವಿಸಿದ ಸಮಸ್ಯೆಯಲ್ಲ. ಇದು ನಿಳೆ ವರ್ಷಗಳಿಂದಲೂ ಇದೆ ಈ ವಿಚಾರದಲ್ಲಿ ಅವರ ಪಕ್ಷದ ಸದಸ್ಯರು ಒಳ್ಳಾರಿಯಿಂದ ಸಂಸಾರು ಒಂದೂವರೆ, ಎರಡು ತಿಂಗಳ ಹಿಂದೆ. ಸುಮಾರು ೫೦೦—೬೦೦ ಜನ ಸೈಕಲಿಸ್ಟ್ಸ್ ಅನ್ನು ಇಲ್ಲಿ ಪ್ರತಿಭಟನೆ ಮಾಡಲಿಕ್ಕೆ ಕರೆದುಕೊಂಡು ಬಂದಿದ್ದರು. ಅದೇ ರೀತಿ ಮಂಗಳೂರು ತೈಲಾಗಾರ ಕೂಡ ನಿನ್ನೆ ಅಥವಾ ಮೊನ್ನೆ ಆದಂತಹ ಘಟನೆ ಅಲ್ಲ. ನಿಲುವಳಿ ಸೂಚನೆ ಯಾವಾಗ ಬರುತ್ತದೆ ಎಂದರೆ, ಯಾವುದಾದರೂ ಮಹತ್ವವಾದಂತಹ ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟ ಒಂದು ಅತಿ ಜರೂರಾದ ಒಂದು ಘಟನೆ ಆದಾಗ ಆ ವಿಚಾರ ಇಲ್ಲಿ ಜರೂರಾಗಿ ಚರ್ಚೆಯಾಗಬೇಕು. ಅಂಥಾದ್ದು ಮಾತ್ರ ನಿಲುವಳಿ ಸೂಚನೆಗೆ ಬರುತ್ತದೆ. ಅದು ಅವರಿಗೆ ಗೊತ್ತುಂಟು. ಗೊತ್ತಿಲ್ಲವೆಂದಲ್ಲ. ೨-೩ ವಾರದ ಹಿಂದೆ ಸಂಬಂಧಪಟ್ಟ ಕೇಂದ್ರ ಸಚಿವರ ಹತ್ತಿರ ನಾನೂ ಇದರ ಬಗ್ಗೆ ಮಾತನಾಡಿದ್ದೇನೆ. ಪತ್ರಿಕೆಯಲ್ಲೂ ಅದು ಬಂದಿದೆ. ಮಂಗಳೂರಿನ ತೈಲಾಗಾರ ವಿಚಾರ ಬಂತು ಮತ್ತು ಸೂಪರ್ ಥರ್ಮಲ್ ಪ್ಲಾಂಟ್, ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ಬಂತು. ಇವಿಷ್ಟರ ವಿಚಾರದಲ್ಲಿ ಒಂದು ಸಂಯುಕ್ತವಾದಂತಹ ಯೋಜನೆಯನ್ನು ಮಾಡಿ ಒಂದು ಪ್ಯಾಕೇಜ್ ಪ್ರೊಗ್ರಾಂ ಮಾಡುತ್ತೇವೆ. ಮತ್ತಿದಕ್ಕೆ ಒಂದು ಸೊಲ್ಯೂಷನ್ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಅದರ ಮೇಲೆ ಒಂದು ಪತ್ರವನ್ನೂ ನಾನು ಬರೆದಿದ್ದೇನೆ. ನೀವು ಯಾವಾಗ ಹೇಳುತ್ತೀರೋ ಆಗ ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಮಂತ್ರಿಗಳನ್ನು ಕರೆಯಿಸಿಕೊಂಡು ನಾವು ಬರಲಿಕ್ಕೆ ತಯಾರಾಗಿದ್ದೇವೆಂದು ಹೇಳಿದ್ದೇನೆ. ಅವರಿಂದ ಉತ್ತರ ಇನ್ನೂ ಬಂದಿಲ್ಲ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಆ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದು ನಿಲುವಳಿ ಸೂಚನೆಯಂತೂ ಆಗುವುದೇ ಇಲ್ಲ

ಶ್ರೀ ಪಂಪಾಪತಿ.—ವಿರೋಧ ಪಕ್ಷದ ಸದಸ್ಯರ ಒಂದು ಸಮಿತಿಯನ್ನು ರಚನೆ ಮಾಡಿ ನಿಯೋಗವನ್ನು ಕಳಿಸುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು.—ಸಭಾ ನಾಯಕರು ದೊಡ್ಡ ಮನಸ್ಸು ಮಾಡಿ ಉತ್ತರ ಹೇಳಿದ್ದಾರೆ. ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನೀವು ಕೂಡಿ ಎಂದರೆ ಕೂಡಬೇಕು. ಸರಿಯಾದ ಉತ್ತರವನ್ನು ಕೊಡಿಸೋಣ ವೆಂದು ಹೇಳಿದ್ದೇನೆ. ಹೀಗೆ ಎದ್ದು ಎದ್ದು ಮಾತನಾಡುವುದರಿಂದ ನಿಮಗೇ ತೊಂದರೆಯಾಗುತ್ತದೆ.

ಶ್ರೀ ಪಂಪಾಪತಿ.—ಆಯಿತು. ಕುಳಿತುಕೊಳ್ಳುತ್ತೇನೆ.